

ಇರಬೇಕು. ಆಮೇಲೆ ಬಾಣಂತನಕ್ಕೆ ಬೆಂಗಳೂರಿಗೆ ಹೋಗು' ಎಂದಿದ್ದ.

ತಾಯಿಗಿಂತ ಹೆಚ್ಚಾಗಿ ಆರೈಕೆ ಮಾಡುತ್ತಿದ್ದ ಅತ್ತೆ ಇರುವಾಗ ಅವಳಿಗೆ ಯಾವ ಕೊರತೆ? ಅವಳು ಒಪ್ಪಿದ್ದಳು. ಸತ್ಯಭಾಮ ಮಗಳನ್ನು ಕರೆದುಕೊಂಡು ಹೋಗಿ ಬಾಣಂತನ ಮಾಡಲು ಆಸಕ್ತಿ ತೋರಿರಲಿಲ್ಲ. ಅವರು ಆಗ ಫ್ರೆಂಡ್ಸ್ ಜೊತೆ ಯೂರೋಪ್ ಟೂರ್ ಹೊರಟಿದ್ದರು. ರಾವ್ ಅಡುಗೆಯ ಜಾನಕಮ್ಮ, ಕೆಲಸದ ರಾಮಿಯ ಸಹಾಯದಿಂದ ಬಾಣಂತನ ಮಾಡಿದ್ದರು. ಎರಡನೆಯ ಬಾಣಂತನ ಮಂಗಳೂರಿನಲ್ಲೇ ನಡೆದಿತ್ತು. ಮದುವೆಯಾಗಿ ಸೆಟ್ಲಾದ ಮೇಲೆ ವಿಭಾ ವರ್ಷಕ್ಕೆ ಎರಡು ಮೂರು ಸಲವಾದರೂ ತಂದೆ–ತಾಯಿಯರನ್ನು ನೋಡಲು ಬೆಂಗಳೂರಿಗೆ ಬರುತ್ತಿದ್ದಳು. ಆದರೆ ವಿಷ್ಣು ಬರುತ್ತಿರಲಿಲ್ಲ. ಅವನ ಹೆಂಡತಿ ಮಕ್ಕಳು ಬೆಂಗಳೂರನ್ನೇ ನೋಡಿರಲಿಲ್ಲ. ಆದರೆ ಬಿಡುವು ದೊರೆತಾಗ ಅಕ್ಕನ ಊರಿಗೆ ಹೋಗುತ್ತಿದ್ದ. ಒಂದೆರಡು ಸಲ ಹೆಂಡತಿ, ಮಕ್ಕಳನ್ನೂ ಕರೆದೊಯ್ದಿದ್ದ. ಅಕ್ಕ–ತಮ್ಮ ಚೆನ್ನಾಗಿದ್ದರು.

* * *

ತಿಂಡಿ ತಿಂದು ಕಾಂಪೌಂಡ್‌ನಲ್ಲಿ ಓಡಾಡುತ್ತಿದ್ದ ರಾವ್ ಮನೆಯ ಮುಂದೆ ಟ್ಯಾಕ್ಸಿ ನಿಂತಾಗ ಕುತೂಹಲದಿಂದ ನೋಡಿದರು. ಅವರ ಆತ್ಮೀಯ ಗೆಳೆಯ ನಾಗೇಶ್‌ರಾವ್, ಪತ್ನಿ ರಮಾಳ ಜೊತೆ ಇಳಿಯುತ್ತಿದ್ದ.

'ವಾಟ್ ಎ ಪ್ಲೆಸೆಂಟ್ ಸರ್‌ಪ್ರೈಜ್! ಬರುವ ವಿಚಾರ ಫೋನ್ ಮಾಡಿ ಹೇಳಬಾರದಿತ್ತಾ?'

'ಹೇಳಿದ್ದಿದ್ದರೆ ನೀನು ಏನ್ಮಾಡ್ತಿದ್ದೆ? ಇಲ್ಲಿಗೇ ತಿಂಡಿಗೆ ಬಾ ಅಂತ ಬಲವಂತ ಮಾಡ್ತಿದ್ದೆ. ಆಗ ನನಗೆ ನಿಮ್ಮ ಏರಿಯಾದ ಹೋಟೆಲ್ ಅಯೋಧ್ಯೆಯಲ್ಲಿ ಮಸಾಲೆದೋಸೆ ತಿನ್ನುವುದಕ್ಕೆ ಅವಕಾಶ ಸಿಗುತ್ತಿತ್ತಾ? ನಡಿ ಒಳಗೆ ಕಾಫಿ ಕುಡಿಯೋಣ.'

'ಯಾಕೆ ಹೋಟೆಲ್ ಅಯೋಧ್ಯೆಯಲ್ಲಿ ಕಾಫಿ ಕುಡಿಯಲಿಲ್ವಾ?'

'ರಾಮ ವನವಾಸಕ್ಕೆ ಹೋದಮೇಲೆ ಅಯೋಧ್ಯೆಯವರಿಗೆ ಕಾಫಿ ಮಾಡೋದು ಮರೆತು ಹೋಗಿದೇಂತ ಕಾಣತ್ತೆ. ಕಾಫಿ ಕಲಗಚ್ಚಿನ ತರಹ ಇತ್ತು.'

'ನೀನೋ ನಿನ್ನ ಜೋಕೋ?' ರಾವ್ ಸ್ನೇಹದಿಂದ ಗೆಳೆಯನ ಬೆನ್ನು ತಟ್ಟಿದರು.

ಇಬ್ಬರೂ ಹಾಲ್‌ನಲ್ಲಿ ಕುಳಿತರು. ರಮಾ ಕಾಫಿ ತಂದರು. ಅವರ ಹಿಂದೆ ಸತ್ಯಭಾಮ ಅಡಿಕೆಪುಡಿ ತಂದರು.

'ವೈನಿ ನೀವು ನನ್ನ ಅಭ್ಯಾಸ ಮರೆತಿಲ್ಲವಲ್ಲಾ... ಥ್ಯಾಂಕ್ಸ್.'

'ನೀವು ರಮಾಗೆ ಥ್ಯಾಂಕ್ಸ್ ಹೇಳಬೇಕು. ಅವರೇ ಒಂದು ಡಬ್ಬದ ತುಂಬಾ ಅಡಿಕೆ ತಂದುಕೊಟ್ಟಿದ್ದಾರೆ.'

'ವೈನಿ ಏನಡಿಗೆ ಮಾಡ್ತಿದ್ದೀರಾ?'

'ಆಲೂಗಡ್ಡೆ–ಈರುಳ್ಳಿ ಹುಳಿ... ಮೊಸರು ಬಜ್ಜಿ.'

'ಮೊಸರು ಬಜ್ಜಿ ಬೇಡ. ರಮಾ ನೀನು ತಂದಿರುವ ಅಕ್ಕಿ ಹಪ್ಪಳ, ಅರಳ ಸಂಡಿಗೆ ಕೊಡು. ಅದನ್ನು ಕರಿದರೆ...'

'ಒಂದು ಪಾವು ಅನ್ನ ತಿಂತೀಯಾ ಅಲ್ವಾ?'

'ಛೆ, ಛೆ, ಅನ್ನ ಕಡಿಮೆ ತಿಂದು ಹಪ್ಪಳ, ಸಂಡಿಗೆ ಜಾಸ್ತಿ ತಿನ್ನುತ್ತೇನೆ.'

ನಂತರ ಗೆಳೆಯರು ಹರಟುತ್ತಾ ಕುಳಿತರು. ರಮಾ ಸತ್ಯಭಾಮಾಗೆ ಸಹಾಯ ಮಾಡಲು ಅಡುಗೆ ಮನೆ ಸೇರಿದರು. ಒಂದು ಗಂಟೆಯ ಹೊತ್ತಿಗೆ ತಟ್ಟೆ ಹಾಕಿ ಸತ್ಯಭಾಮ ಕೂಗಿದರು – 'ಊಟ ರೆಡಿ.'

ಡೈನಿಂಗ್ ಹಾಲ್‌ಗೆ ಬಂದ ನಾಗೇಶ್ ಕೇಳಿದರು. 'ವೈನಿ ಯಾಕೆ ಎರಡೇ ತಟ್ಟೆ ಹಾಕಿದ್ದೀರಾ?'

'ನಿಮ್ಮ ಊಟ ಆಗಲಿ. ಆಮೇಲೆ ನಾವಿಬ್ಬರೂ ಊಟ ಮಾಡ್ತೀವಿ' ಸತ್ಯಭಾಮ ಹೇಳಿದರು.

'ನೋ ನೋ... ಎಲ್ಲಾ ಒಟ್ಟಿಗೆ ಮಾಡಬೇಕು. ನಮ್ಮನೆಯಲ್ಲಿ ಅದೇ ಪದ್ಧತಿ ಇರೋದು. ಇನ್ನೆರಡು ತಟ್ಟೆ ತನ್ನಿ.'

ಸತ್ಯಭಾಮ ಗಂಡನ ಮುಖ ನೋಡಿದರು. ಅವರು ತಿಂಡಿ, ಅಡುಗೆ ಮಾಡಿ ಡೈನಿಂಗ್ ಟೇಬಲ್ ಮೇಲೆ ತಂದಿಡುತ್ತಿದ್ದರು. ರಾವ್ ತಾವೇ ಬಡಿಸಿಕೊಂಡು, ತಟ್ಟೆ ತೊಳೆದು, ಟೇಬಲ್ ಕ್ಲೀನ್ ಮಾಡುತ್ತಿದ್ದರು. ಮಕ್ಕಳು ಬಂದಾಗ ತಾವೇ ಬಡಿಸುತ್ತಿದ್ದರು. ನೆಂಟರಿಷ್ಟರು ಬರುತ್ತಿದ್ದುದೇ ಕಡಿಮೆ.

'ವೈನಿ, ತಟ್ಟೆ ತನ್ನಿ.'

ಸತ್ಯಭಾಮ ಎರಡು ತಟ್ಟೆ ತಂದರು. ಗಂಡ–ಹೆಂಡತಿ ಮುಕ್ತಕಂಠದಿಂದ ಹೊಗಳುತ್ತಾ ಊಟ ಮಾಡಿದರು.

'ರಾವ್, ನಾನು ಈಗ ಮಲಗಲೇಬೇಕು. ಬೆಳಗ್ಗೆ ಬೇಗ ಎದ್ದಿದ್ದೆ ಅಲ್ವಾ... ನಿದ್ರೆ ಬರ್ತಾಯಿದೆ.'

ರಾವ್ ಗೆಳೆಯನಿಗೆ ರೂಮ್ ತೋರಿಸಿದರು.

'ರಮಾ ನೀವೂ ಮಲಗಿ ಹೋಗಿ. ನಾನು ಅಡುಗೆ ಮುಚ್ಚಿಡ್ತೇನೆ' ಸತ್ಯಭಾಮ ಹೇಳಿದರು.

ಐದು ಗಂಟೆಯವರೆಗೂ ನಿದ್ರೆ ಮಾಡಿದ ನಾಗೇಶ್ ಮುಖ ತೊಳೆದು ಬಂದು ಕೂಗಿದರು. 'ರಮಾ ಟೀ ಕೊಡು.'

ರಮಾ ಟೀ, ಕೋಡುಬಳೆ, ರವೆ ಉಂಡೆ ತಂದಿಟ್ಟರು. ಟೀ ಕುಡಿದು ನಾಗೇಶ್ ಹೇಳಿದರು. 'ರಾವ್ ರೆಡಿಯಾಗು. ಹೊರಗೆ ಹೋಗಿ ಬರೋಣ.'

'ನಾನು ಬರಲ್ಲ. ನಾನು ಹೊರಗೆ ಹೋಗಿ ವರ್ಷಗಳೇ ಆಗೋಯ್ತು.'

'ಯಾಕೆ?'

'ಈಗ ಮೂರು ವರ್ಷಗಳ ಹಿಂದೆ ರಸ್ತೆಯಲ್ಲಿ ಹೋಗುವಾಗ ಆಯಾ ತಪ್ಪಿ ಬಿದ್ದುಬಿಟ್ಟೆ. ತರಚಿದ ಗಾಯಗಳಾದವು. ಆಗಲಿಂದ ಭಯ. ಮೂಳೆಗೀಳೆ ಮುರಿದು ಆಸ್ಪತ್ರೆ ಸೇರಿದರೆ ನಮ್ಮನ್ನು ಯಾರೋ ನೋಡಿಕೊಳ್ತಾರೆ?'

'ನೀನು ಏನೇನೋ ಹೇಳಬೇಡ. ರೆಡಿಯಾಗಿ ವಾಕಿಂಗ್ ಸ್ಟಿಕ್ ತೊಗೋ. ನಾನೇನು ನಿನ್ನನ್ನು ಮೂರು ಮೈಲಿ ನಡೆಸಲ್ಲ. ಇಲ್ಲಿಂದ ಆಟೊದಲ್ಲಿ ಈ ಏರಿಯಾದ ಮಿನಿ ಮಾರ್ಕೆಟ್‌ಗೆ ಹೋಗಿ, ತರಕಾರಿ ತೆಗೆದುಕೊಳ್ಳೋಣ. ಆಮೇಲೆ ಆಂಜನೇಯನ ದೇವಸ್ಥಾನಕ್ಕೆ ಹೋಗಿ ವಾಪಸ್ಸು ಬರೋಣ.'

ರಾವ್ ಒಪ್ಪಲೇ ಬೇಕಾಯ್ತು.

'ರಾತ್ರಿಗೆ ಚಪಾತಿ, ಮಧ್ಯಾಹ್ನದ ಹುಳಿ ಸಾಕು. ಪಲ್ಯ ಮಾಡಬೇಡಿ' ಎಂದು ನಾಗೇಶ್ ಹೇಳಿ ಗೆಳೆಯನ ಜೊತೆ ಹೊರಟರು.

ಟಿ.ವಿ. ಮುಂದೆ ಕುಳಿತರೂ ಸತ್ಯಭಾಮ ಮನಸ್ಸು ನಾಗೇಶ್–ರಮಾರ ಬಗ್ಗೆಯೇ ಯೋಚಿಸುತ್ತಿತ್ತು. ಈ ವಯಸ್ಸಿನಲ್ಲೂ ಇವರಿಬ್ಬರು ಎಷ್ಟು ಲವಲವಿಕೆಯಿಂದ ಇದ್ದಾರೆ! ನಾವ್ಯಾಕೆ ಹೀಗಿಲ್ಲ?

ರಮಾ ಪಕ್ಕ ಬಂದು ಕುಳಿತು ಹುರಿಗಾಳು ತಟ್ಟೆಗೆ ಹಾಕಿದರು.

'ರಮಾ ನಿಮ್ಮ ಮಕ್ಕಳು ಎಲ್ಲಿದ್ದಾರೆ?'

'ಮಗಳು ನಮ್ರತಾ ಚಿತ್ರದುರ್ಗದಲ್ಲಿದ್ದಾಳೆ. ಅವಳ ಗಂಡ ಬ್ಯಾಂಕ್ ಮ್ಯಾನೇಜರ್. ವರ್ಗಾವಣೆ ಇದ್ದೇ ಇರತ್ತೆ. ಇಬ್ಬರು ಗಂಡು ಮಕ್ಕಳು. ಮಕ್ಕಳಿಗೆ ಸ್ಕೂಲು ಸರಿಹೋಗ್ತಿಲ್ಲ ಅಂತಿರ್ತಾಳೆ. ಬಹುಶಃ ಮಕ್ಕಳನ್ನು ಅತ್ತೆ ಮನೆಯಲ್ಲಿ ಬಿಡಬಹುದು.'

'ನೀವೇ ಇಟ್ಟುಕೊಳ್ಳಬಹುದಲ್ಲ ವಾ?'

'ನಾವು ಜವಾಬ್ದಾರಿ ತೆಗೆದುಕೊಳ್ಳಲು ಸಿದ್ಧರಿಲ್ಲ. ನಮ್ಮ ಕಷ್ಟ ಸುಖಕ್ಕೆ ಮಕ್ಕಳು ಸ್ಪಂದಿಸದಿದ್ದ ಮೇಲೆ ನಾವ್ಯಾಕೆ ಅವರಿಗೆ ಸಹಾಯ ಮಾಡಬೇಕು?'

'ಯಾಕೆ ಹಾಗಂತೀರಾ?'

'ಹೋದ ವರ್ಷ ನನಗೆ ಹರ್ನಿಯಾ ಆಪರೇಷನ್ ಆಗಿತ್ತು. ಮಗಳಿಗೆ ಫೋನ್ ಮಾಡಿ, ಆಪರೇಷನ್ ಸಮಯಕ್ಕೆ ನೀನು ಬಾ, ಆಪರೇಷನ್ ಆದ ಮೇಲೆ ಅಮ್ಮನ್ನ ಕರೆದುಕೊಂಡು ಹೋಗಿ ಒಂದು ತಿಂಗಳು ನೋಡಿಕೋಂತ ನಾಗೇಶ್ ಹೇಳಿದರು. ಅವಳು, ಆಗಲ್ಲಪ್ಪ. ನನಗೆ ನನ್ನ ಗಂಡ ಮಕ್ಕಳನ್ನು ನೋಡಿಕೊಳ್ಳುವುದಕ್ಕೇ ಬಿಡುವಿಲ್ಲ ಅಂದುಬಿಟ್ಟಳು. ಇವರೇ ಕೆಲಸದ ಕಾಮಾಕ್ಷಿ ಸಹಾಯದಿಂದ ನನ್ನನ್ನು ನೋಡಿಕೊಂಡ್ರು. ಆಪರೇಷನ್ ವಿಚಾರ ಗೊತ್ತಾದ ಮೇಲೂ ಅವಳು ನನ್ನನ್ನು ನೋಡಕ್ಕೆ ಬರಲಿಲ್ಲ.'

'ಮಗ ಎಲ್ಲಿದ್ದಾನೆ?'

'ಗೋವಾದಲ್ಲಿದ್ದಾನೆ. ಅವನ ಹೆಂಡತಿ ಮಂಗಳೂರು ಕಡೆಯವಳು. ಅವಳ ತಂದೆ–ತಾಯಿ ಗೋವಾದಲ್ಲೇ ಸೆಟ್ಲ್ ಆಗಿದ್ದಾರೆ. ಅವರೆಲ್ಲರಿಗೂ ಕನ್ನಡ ಬರತ್ತೆ. ಆದರೆ ಅವರು ಕೊಂಕಣಿ ಮಾತಾಡ್ತಾರೆ. ಮಕ್ಕಳು ಇಂಗ್ಲಿಷ್, ಕೊಂಕಣಿ ಮಾತಾಡ್ತಾರೆ. ಇವನು ಮನೆ ಅಳಿಯ ಆಗಿದ್ದಾನೆ. ನೀವು ಇಲ್ಲಿಗೆ ಬಂದುಬಿಡಿ. ನಾನಾಗ ಬೇರೆ ಮನೆ ಮಾಡ್ತೀನಿ ಅಂತಾನೆ. ಭಾಷೆ ಬಾರದ ಊರಿಗೆ ಹೋಗಿ ನಾವೇನು ಮಾಡಲು ಸಾಧ್ಯ?'

'ಹಾಗೆಂದು ಮಗನಿಂದ ದೂರವಿದ್ದೀರಾ?'

'ನಾವು ಅಲ್ಲಿಗೆ ಹೋದ ತಕ್ಷಣ ಅವನು ಹತ್ತಿರವಾಗಿಬಿಡ್ತಾನಾ? ಅವನ ಸಂಸಾರದಲ್ಲಿ ಅವನು ಮುಳುಗಿರ್ತಾನೆ. ನಾವು ಹೋದರೆ ಅವನ ಹೆಂಡತಿಗೆ ಬೇಜಾರಾಗಬಹುದು. ಆದ್ದರಿಂದ ದೂರದಲ್ಲೇ ಇದ್ದುಕೊಂಡು ಸಂಬಂಧ ಉಳಿಸಿಕೊಳ್ಳೋಣ ಅಂದುಕೊಂಡು ಸುಮ್ಮನಿದ್ದೇವೆ.'

ಸತ್ಯಭಾಮ ತಮ್ಮ ಮಕ್ಕಳ ಬಗ್ಗೆ ಹೇಳಿದರು. ಆದರೆ ಅವರಿಗೆ ತಾವು ಮಂಗಳೂರಿಗೆ ಹೋಗಬೇಕೆಂದಿರುವ ವಿಚಾರ ಹೇಳಲಿಲ್ಲ.

ಏಳುಗಂಟೆಯ ಹೊತ್ತಿಗೆ ರಾವ್ ಚೀಲದ ತುಂಬಾ ತರಕಾರಿ ತುಂಬಿಕೊಂಡು ಬಂದರು.

'ವೈನಿ ಅರ್ಧ ಕಪ್ ಕಾಫಿ ಕೊಡ್ತೀರ' ತರಕಾರಿ ಒಳಗಿಟ್ಟುಕೊಳ್ಳಿ. ನಾಳೆ ಪೂರಿ ಸಾಗು ಮಾಡಿ.'

'ರಾವ್ ಎಲ್ಲಿ?' ರಮಾ ಕೇಳಿದರು.

